ಅನೀತಿಗಳ ಬದಲು ಶೋಷಣೆ– ಅಪಮಾನಗಳು ಮುಖ್ಯವಾದ ಲೋಕದ ಪರಿಭಾಷೆಯ ಓದುಗಳು ಇವು. ಈ ಬಗೆಯ ಓದಿನ ಸ್ವಾತಂತ್ರ್ಯವನ್ನು ಪಡೆಯಲು ಆಧುನಿಕ ಓದು–ಸಂಹಿತೆಗಳು ಕೂಡ ಅಲ್ಲಿ ರೂಪುಗೊಂಡವು. ಮೊದಲು ಆದದ್ದು ಎಂದರೆ ವೇದೋಪನಿಷತ್ತುಗಳಿಗಿದ್ದ ಅಪೌರಷೇಯತೆಯ ಸಿಂಧುತ್ವವನ್ನು ಅವು ಅಸಿಂಧುಗೊಳಿಸಿದವು. ರಾಮಾಯಣ ಹಾಗೂ ಮಹಾಭಾರತದ ಪಾತ್ರಗಳು ದಟ್ಟವಾದ ಕತೆ, ಮಾನವೀಯ ಸಂಬಂಧಗಳು ಇವುಗಳನ್ನೆಲ್ಲ ಹೊಂದಿದ್ದರಿಂದ ಅವು ವ್ಯಾಖ್ಯಾನಕ್ಕೆ ಬೇಕಾಗುವ ಸ್ಥಿತಿ ಸ್ಥಾಪಕತ್ವವನ್ನು ಹೊಂದಿದ್ದರೂ ಅವುಗಳ ಸುತ್ತ ದೇವತಾ ಲೋಕದ ಉಪಸ್ಥಿತಿಗಳು ಅತಿಂದ್ರೀಯ ಲೋಕದ ಅತಾರ್ಕಿಕ ನೆಲೆಗಳಿಗೆ ಸೆಳೆಯುತ್ತ ಇದ್ದುದರಿಂದ ಅವುಗಳನ್ನು ಡಿಸ್–ಕನೆಕ್ಟ್ ಮಾಡಲೇಬೇಕಾಯಿತು. ಇಷ್ಟೇ ಏಕೆ, ಈ ಗ್ರಂಥಗಳ ರಚನಾಕಾರನು ಒಬ್ಬ–ಬಹಳವೆಂದರೆ ನಮ್ಮೆಲ್ಲರಿಗಿಂತ ಹೆಚ್ಚು ಪ್ರಬುದ್ಧನೂ ಪ್ರತಿಭಾವಂತನೂ ಆದ ವೇದವ್ಯಾಸನೆಂಬ ಮನುಷ್ಯನೇ ಹೊರತು ಅವನು ಪಾರಂಪರಿಕ ಅರ್ಥದಲ್ಲಿ ದೇವರು ಅಲ್ಲ. ಹೀಗೆ ಇನ್ನೂ ಅನೇಕ ಸ್ವಯಂ ಘೋಷಿತ ಸ್ವಾತಂತ್ರ್ಯಗಳನ್ನು ತಾನೇ ಘೋಷಿಸಿಕೊಳ್ಳದೆ ಆಧುನಿಕ ಓದು, ತನ್ನ ಕಾಲ ಕೆಳಗಿನ ಸಂಕಟಕ್ಕೆ ಈ ಗ್ರಂಥಗಳನ್ನು ಪ್ರಸ್ತುತಗೊಳಿಸಿಕೊಳ್ಳುವುದು ಸಾಧ್ಯವಿರಲಿಲ್ಲ.

ಈ ಬಗೆಯ ಹೊಸ ಓದಿನ ಬಿರುಗಾಳಿ ಮಹಾರಾಷ್ಟ್ರದ ನೆಲದಲ್ಲಿ ನಡೆದಷ್ಟು ಕರ್ನಾಟಕದ ಬಯಲಿನಲ್ಲಿ ಬೀಸಲಿಲ್ಲ. ಇದಕ್ಕೆ ಒಂದು ಚಾರಿತ್ರಿಕ ಕಾರಣವೂ ಇದೆ. 16 ಹಾಗೂ 17ನೇ ಶತಮಾನದಲ್ಲಿ ಗೋವಾ ಹಾಗೂ ಮಹಾರಾಷ್ಟ್ರಗಳಿಗೆ ಬಂದಿಳಿದ ಪೋರ್ತುಗೀಸ್ ಪಾದ್ರಿಗಳು, ಇಡೀ ಭಾರತದ ಧಾರ್ಮಿಕ– ಪ್ರಜ್ಞೆಯನ್ನು ನಾಶ ಮಾಡುವ ಬೃಹತ್ ಯೋಜನೆಯ ಪ್ರಾರಂಭವನ್ನು ಇಲ್ಲಿಯೇ ಮಾಡಿದರು. ಜೆಜುವಿಟ್ ಧಾರ್ಮಿಕ ಸಂಸ್ಥೆಯ ಅನೇಕ ಪಾದ್ರಿಗಳು, ಫಾದರ್‌ಗಳು ಈ ಪ್ರದೇಶದಲ್ಲಿನ ಜನರ ಭಾರತೀಯತೆಯನ್ನು ನಾಶಗೊಳಿಸಲು ಭಾರತೀಯ ಧರ್ಮಗ್ರಂಥಗಳ ಪಟ್ಟಕ್ಕೆ ಏರಿ ಕೂತಿದ್ದ ಮಹಾಭಾರತದ ಮೇಲೆ ಕ್ರೂರ ದಬ್ಬಾಳಿಕೆಯನ್ನೇ ಮಾಡಲು, ಕೊಂಕಣಿ ಹಾಗೂ ಮರಾಠಿಯಲ್ಲಿ ಹೊಸ ಗ್ರಂಥಗಳನ್ನು ಬರೆದರು. ಫಾದರ್ ಸ್ಟಿಫನ್ ಸ್ಟ್ಯಾನ್ ಬರೆದ ಮರಾಠಿ ಕ್ರಿಸ್ತ ಪುರಾಣ, ಹಾಗೂ ಡಾನ್–ಕ್ರುವಾ ಎನ್ನುವವ ಬರೆದ 'ಪೀಟರ್ ಪುರಾಣ' ಇವು ಎರಡನ್ನೇ ನೋಡಿದರೂ ಮರಾಠಿಯ ಕರ್ವೆ, ಭಿಡೆ ಇತ್ಯಾದಿ ಲೇಖಕರ ಹಿಂದೆ ಮಹಾಭಾರತದ ಎಂತೆಂತಹ ಪಠ್ಯಗಳು ಇದ್ದವು ಎನ್ನುವುದು ಗೊತ್ತಾಗುತ್ತದೆ. ಪಾರ್ವತಿ ಒಬ್ಬ ವೇಶ್ಯೆ, ಅವಳ ಅಕ್ರಮ ಸಂತಾನ ಗಣಪತಿ, ಶಿವನಿಗೆ ಅವಳು ಅದೊಂದು ಆನೆ ತಲೆಯ ವಿಕೃತ ಮಗು ಹುಟ್ಟಿತ್ತು ಎಂದು ಯಾಮಾರಿಸಿದಳು, ಇತ್ಯಾದಿ ಮಾತುಗಳನ್ನು ಈ ಪಾದ್ರಿಗಳು ಬರೆದರು. ಇನ್ ಕ್ವಿಝಿಶನ್ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ, ಧಾರ್ಮಿಕ ಬಲಾತ್ಕಾರಗಳನ್ನೂ ಮಾಡಿದರು.

ಆದರೆ, 20ನೇ ಶತಮಾನದ ಹಿಂದೆ ಈ ಬಗೆಯ ಮಹಾಭಾರತಗಳ ವಿಕೃತ ಪಠ್ಯಗಳಿದ್ದರೂ, ಮರಾಠಿಯ ಚಿಂತನಶೀಲ ಲೇಖಕರು, ಈ ಬಗೆಯ ವ್ಯಭಿಚಾರಿತ ಪಠ್ಯಗಳಿಗೆ ಯಾವ ಪ್ರತಿಕ್ರಿಯೆಯನ್ನೂ ನೀಡಲಿಲ್ಲ. ಅದರ ಬದಲು ತಮ್ಮದೇ ದೇಶದ ಪಠ್ಯಗಳಿಗೆ ತಮ್ಮ ದೇಶದ ಮತೀಯ ಪಂಡಿತರು ಮಾಡಿದ, ಮಾನವೀಯತೆಯನ್ನು ಅಧ್ಯಾತ್ಮದ ಉಪ ಉತ್ಪಾದನೆ ಎಂದು ತಿಳಿದ ಅರ್ಥಾನುಸಂಧಾನುಗಳನ್ನು ಅವರು ತಮ್ಮ ನಿಜವಾದ ಪ್ರತಿಪಕ್ಷಗಳೆಂದೋ, ಪ್ರತಿವಾದಿಗಳೆಂದೋ ತಿಳಿದು ಪ್ರತಿಕ್ರಿಯಿಸಿದರು. ಇದು ಮರಾಠಿ ಚಿಂತನೆಯ ಪ್ರಬುದ್ಧತೆಯೇ ಎನ್ನಬೇಕು. ಪಶ್ಚಿಮದ ಧೂರ್ತ ಪಾಂಡಿತ್ಯಕ್ಕಿಂತ ತಮ್ಮ ಪರಂಪರೆಯಲ್ಲೇ ಅಡಗಿದ ಕ್ರೂರ ಹಾಗೂ ಹಿಂಸ್ರಕ ಓದುಗಳ ಹಿಂದಿನ ಶಕ್ತಿಯು ಹೆಚ್ಚು ಧೂರ್ತವಾದದ್ದು ಎಂದು ತಿಳಿದ, ಮರಾಠಿ ಚಿಂತನೆಯನ್ನು ಬೆಳೆಸಿದ ದೊಡ್ಡ ಚಿಂತಕರ ಕಠೋರತೆ ಹಾಗೂ ಕುಸುಮ ಕೋಮಲತೆ ಎರಡನ್ನೂ ಸರಿಯಾಗಿ ಜೀರ್ಣಿಸಿಕೊಂಡದ್ದು ರಕ್ತಗತ ಸಂಸ್ಕಾರವೇ ಎನ್ನಬೇಕು.